ಕರ್ನಾಟಕ ಸರ್ಕಾರ

ಜನವರಿ 17, 2016

**ಹೆಸರಾಂತ ಚಿತ್ರ ನಿರ್ದೇಶಕ ಹಾಗೂ ಸುಪ್ರಸಿದ್ಧ ಗೀತ ರಚನಾಕಾರ**
**ಲಕ್ಷ್ಮಣ ರಾವ್ ಮೋಹಿತೆ ಅವರ ನಿಧನಕ್ಕೆ**
**ಮುಖ್ಯಮಂತ್ರಿ ಸಂತಾಪ**

ಬೆಂಗಳೂರು, ಜನವರಿ 17:

ಗೀತಪ್ರಿಯ ಎಂದೇ ಜನಪ್ರಿಯರಾಗಿದ್ದ ಕನ್ನಡ ಚಿತ್ರರಂಗದ ಹೆಸರಾಂತ ನಿರ್ದೇಶಕ, ಖ್ಯಾತ ಸಂಭಾಷಣಾಕಾರ ಹಾಗೂ ಸುಪ್ರಸಿದ್ಧ ಗೀತ ರಚನಾಕಾರ ಶ್ರೀ ಲಕ್ಷ್ಮಣರಾವ್ ಮೋಹಿತೆ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಶ್ರೀ ಲಕ್ಷ್ಮಣರಾವ್ ಮೋಹಿತೆ ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಸಂಗೀತ ನಿರ್ದೇಶಕ ವಿಜಯ ಭಾಸ್ಕರ್ ಅವರಿಗೆ ಸಲ್ಲುತ್ತದೆ.

ಶ್ರೀರಾಮ ಪೂಜಾ ಚಿತ್ರಕ್ಕೆ ಎರಡು ಹಾಡುಗಳ ರಚಿಸಿ ಗೀತ ರಚನಾಕಾರರಾಗಿ 1955 ರಲ್ಲಿ ಕನ್ನಡ ಚಿತ್ರ ರಂಗಕ್ಕೆ ಪ್ರವೇಶಿಸಿದ ಶ್ರೀ ಲಕ್ಷ್ಮಣರಾವ್ ಮೋಹಿತೆ ಅವರು ತದನಂತರ 1956 ರಲ್ಲಿ ಭಾಗ್ಯಚಕ್ರ ಚಿತ್ರಕ್ಕೆ ಗೀತ ರಚನೆಯ ಜೊತೆಗೆ ಸಂಭಾಷಣಾಕಾರರಾದರು. ಅಲ್ಲದೆ, ಗೆಳೆಯ ವಿಜಯ ಭಾಸ್ಕರ್ ಅವರಿಂದ ಗೀತಪ್ರಿಯ ಎಂಬ ಹೆಸರು ಪಡೆದು ಕೊಂಡರು. ಅಂತೆಯೇ, ಮಣ್ಣಿನ ಮಗ ಚಿತ್ರವನ್ನು ನಿರ್ದೇಶಿಸಿ 1968 ರಲ್ಲಿ ಚಿತ್ರ ನಿರ್ದೇಶಕರೂ ಆದದ್ದು ಇದೀಗ ಇತಿಹಾಸ.

ಮಣ್ಣಿನ ಮಗ ಚಿತ್ರದಲ್ಲಿನ *ಇದೇನಾ ಸಭ್ಯತೇ ? ಇದೇನಾ ಸಂಸ್ಕೃತಿ,* ಹೊಂಬಿಸಿಲು ಚಿತ್ರದ *ನೀರಬಿಟ್ಟು ನೆಲದ ಮೇಲೆ ದೋಣಿ ಸಾಗದು* ಹಾಗೂ ಬೆಸುಗೆ ಚಿತ್ರದಲ್ಲಿ *ಬೆಸುಗೆ..ಬೆಸುಗೆ...* ಶೀರ್ಷಿಕಾ ಗೀತೆಯಲ್ಲಿ ಬೆಸುಗೆ ಪದವನ್ನು 58 ಬಾರಿ ಬಳಸಿ ಕೇಳುಗರ ಕಿವಿಗೆ ಇಂಪನ್ನು ಹಾಗೂ ಮನಕ್ಕೆ ತಂಪನ್ನು ಉಂಟು ಮಾಡಿದ ಪ್ರತಿಭೆ ಗೀತಪ್ರಿಯ ಅವರದ್ದು.

*ಗೀತಪ್ರಿಯ ಅವರು ನಮ್ಮಿಂದ ದೂರವಾದರೂ ಅವರು ರಚಿಸಿರುವ ಹಾಡುಗಳು ಮಾತ್ರ ಸದಾ ನಮಗೆ ಹತ್ತಿರವೇ ಇರುತ್ತದೆ* ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

**********

ಡಿ ಪಿ ಎಂ